**ಮೆಂಬರ್ ಎಡಿಶನಲ್ ಎಂಎಸಿಟಿ ಮತ್ತು**
**ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ , ಭಟ್ಕಳ**

ಎಂವಿಸಿ ನಂ. 252/2025
**ಪಿಡಬ್ಲುಃ 2**
**ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.**
**ದಿನಾಂಕಃ** 06-03-2026

| | | |
|---|---|---|
| **ಹೆಸರು** | : | ಡಾ. ದಿನೇಶ ಕುಮಾರ ಶೆಟ್ಟಿ |
| **ತಂದೆಯ ಹೆಸರು** | : | ಜಗನ್ನಾಥ ಶೆಟ್ಟಿ |
| **ವಯಸ್ಸು** | : | 57 ವರ್ಷ |
| **ಉದ್ಯೋಗ** | : | ಕೀಲು ಮೂಳೆ ತಜ್ಞರು |
| **ವಾಸ** | : | ಚಿನ್ಮಯಿ ಆಸ್ಪತ್ರೆ, ಕುಂದಾಪುರ |

**ಈ ಪ್ರಕರಣದಲ್ಲಿ ಸದರಿ ಸಾಕ್ಷಿಯು ವೈದ್ಯರಿದ್ದು ಅರ್ಜಿದಾರ ಮತ್ತು ಎದುರುದಾರ ವಕೀಲರ ಸಮ್ಮತಿ ಮೇರೆಗೆ ನ್ಯಾಯಾಲಯ ಮತ್ತು ವೈದ್ಯರ ಸಮಯ, ವೆಚ್ಚವನ್ನು ಗಮದಲ್ಲಿಟ್ಟುಕೊಂಡು ಸದರಿ ಸಾಕ್ಷಿಯನ್ನು ಉಚ್ಚ ನ್ಯಾಯಾಲಯದ ನಿಯಮಾವಳಿ ಪ್ರಕಾರ ಸಾಕ್ಷಿಯನ್ನು ವಿ.ಸಿ ಮುಖಾಂತರ ದಾಖಲಿಸಿಕೊಳ್ಳಲಾಗಿದೆ. ಸದರಿ ಸಾಕ್ಷಿಯ ಸಹಿಯನ್ನು ಪ್ರಮಾಣ ಪತ್ರದ ಮೇಲೆ ಇಮೇಲ್ ಮುಖಾಂತರ ಸಾಕ್ಷಿಗೆ ಕುಳುಹಿಸಿ ಅವರು ಸಹಿ ಮಾಡಿ ಕಳುಹಿಸಿದ್ದನ್ನು ಕಡತಕ್ಕೆ ಅಳವಡಿಸಿಕೊಳ್ಳಲಾಗಿದೆ.**

**ಮುಖ್ಯ ವಿಚಾರಣೆಃ ವಿ.ಸಿ ಮುಖಾಂತರ ಶ್ರೀ ಜಿ.ಎಂ.ಎಂ. ವಕೀಲರಿಂದ :-**

ನಾನು ಸುಮಾರು 25 ವರ್ಷದಿಂದ ಚಿನ್ಮಯಿ ಆಸ್ಪತ್ರೆ, ಕುಂದಾಪುರದಲ್ಲಿ ಕೀಲು ಮೂಳೆ ತಜ್ಞನಾಗಿ ಕೆಲಸ ಮಾಡುತ್ತಿದ್ದೇನೆ.

ಈ ಪ್ರಕರಣದ ಅರ್ಜಿದಾರರು ದಿನಾಂಕ 29.12.2024 ರಂದು ವಾಹನ ಅಪಘಾತದಲ್ಲಿ ಗಾಯಗೊಂಡು ನಮ್ಮ ಆಸ್ಪತ್ರೆಗೆ ಚಿಕಿತ್ಸೆ ಪಡೆಯಲು ಬಂದಿದ್ದರು. ಅರ್ಜಿದಾರನನ್ನು ನಾನು ಪರೀಕ್ಷಿಸಿದಾಗ ಅವರ ಬಲ ಕೈಯ ತೋರಬೆರಳಿನ ಎರಡು ಮೂಳೆಗಳು ಮುರಿದಿದ್ದವು ಮತ್ತು ಬಲಗೈಯಲ್ಲಿ ಎರಡು ಹರಿದ ಗಾಯಗಳು ಇದ್ದವು. ಅದೇ ರೀತಿ ತಲೆಯ ಮೇಲೆ ಹರಿದ ಗಾಯ ಇತ್ತು. 1 ನೇ ಗಾಯವು ತೀವ್ರ ಸ್ವರೂಪದ ಗಾಯ ಆಗಿರುತ್ತದೆ. 2 ಮತ್ತು 3 ನೇ ಗಾಯಗಳು ಸಾದಾ ಸ್ವರೂಪದ ಗಾಯಗಳಾಗಿದ್ದವು. ಅರ್ಜಿದಾರನ ಕೈ ಬೆರಳು ಮುರಿತಗೊಂಡಿದ್ದಕ್ಕೆ ಪಿಒಪಿ ಪ್ಲಾಸ್ಟರ್ ಹಾಕಲಾಯಿತು. ದಿನಾಂಕ 01.01.2025 ರಂದು ಅರ್ಜಿದಾರರನ್ನು ಆಸ್ಪತ್ರೆಯಿಂದ ಬಿಡುಗಡೆ ಮಾಡಲಾಯಿತು. ಅರ್ಜಿದಾರ ಸುಮಾರು 7 ಬಾರಿ ಹೊರರೋಗಿಯಾಗಿ ಚಿಕಿತ್ಸೆ ಪಡೆದುಕೊಂಡಿದ್ದಾರೆ.

ದಿನಾಂಕ 11.12.2025 ರಂದು ಅರ್ಜಿದಾರ ಅಂಗನ್ಯೂನ್ಯತೆ ಪ್ರಮಾಣ ಪತ್ರವನ್ನು ಪಡೆಯುವುದಕ್ಕಾಗಿ ನಮ್ಮ ಆಸ್ಪತ್ರೆಗೆ ಬಂದಿದ್ದರು. ಆಗ ನಾನು ಅರ್ಜಿದಾರರನ್ನು ಪರೀಕ್ಷಿಸಿದಾಗ ಅರ್ಜಿದಾರನ ಬಲ ತೋರುಬೆರಳು ವಕ್ರ ಆಗಿತ್ತು, ಅರ್ಜಿದಾರನಿಗೆ ಮುಷ್ಠಿ ಮಾಡಲು ಸುಮಾರು ಶೇಕಡಾ

40 ರಷ್ಟು ಕುಂಟಿತ ಆಗಿತ್ತು. 2 ಮತ್ತು 3 ನೇ ಕೈ ಬೆರಳು ಮಡಚುವಿಕೆಯಲ್ಲಿ ಶೇಕಡಾ 30 ರಷ್ಟು ಕಡಿವೆ ಆಗಿತ್ತು. ಅದಕ್ಕಾಗಿ ಅರ್ಜಿದಾರನ ಬಲಗೈ ತೋರುಬೆರಳಿಗೆ ಶೇಕಡಾ 16 ರಷ್ಟು ಅಂಗನ್ಯೂನ್ಯತೆ ಆಗಿರುತ್ತದೆ. ಆ ಬಗ್ಗೆ ನಾನು ಪ್ರಮಾಣ ಪತ್ರ ನೀಡಿರುತ್ತೇನೆ. ಸದ್ರಿ ದಾಖಲೆಯನ್ನು ವಿಸಿ ಮುಖಾಂತರ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ-5 ಎಂದು, ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ 2ನೇ ಎದ್ರುದಾರರ ಪರ ಶ್ರೀ ಎಸ್ ಎಮ್ ಬಿ ವಕೀಲರಿಂದ :-**

ಅರ್ಜಿದಾರರಿಗೆ ಯಾವುದೇ ಶಸ್ತ್ರ ಚಿಕಿತ್ಸೆ ಮಾಡಿಲ್ಲ ಎಂದರೆ ಸರಿ. ಅರ್ಜಿದಾರನಿಗೆ ತೋರುಬೆರಳಿಗೆ ಮಾತ್ರ ಮುರಿತು ಆಗಿತ್ತು ಎಂದರೆ ಸರಿ. ಬೇರೆ ಯಾವುದೇ ಭಾಗದಲ್ಲಿ ಮುರಿತ ಆಗಿರಲಿಲ್ಲ ಎಂದರೆ ಸರಿ. ಅರ್ಜಿದಾರನಿಗೆ ಚಿಕಿತ್ಸೆ ಕೊಡುವಾಗ ಎಕ್ಸರೇ ತೆಗೆದು ಪರಿಶೀಲನೆ ಮಾಡಿರುತ್ತೇನೆ. ಅರ್ಜಿದಾರನ ಎಕ್ಸರೇ ರಿಪೋರ್ಟನ್ನು ಪಡೆದುಕೊಂಡರೆ ನಿಜ ಸಂಗತಿ ಗೊತ್ತಾಗುತ್ತದೆ ಎಂದು ಅದನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರ ಹೊರರೋಗಿಯಾಗಿ ಚಿಕಿತ್ಸೆ ಪಡೆದುಕೊಂಡ ದಾಖಲೆಗಳಲ್ಲಿ ಅರ್ಜಿದಾರನ ತೋರುಬೆರಳು ವಕ್ರವಾಗಿ ಜೋಡಣೆಯಾಗಿದೆ ಎಂದು ಬರೆದಿರುವುದಿಲ್ಲ ಎಂದರೆ ಸರಿಯಲ್ಲ.

ಅರ್ಜಿದಾರ ಕೊನೆಯ ಬಾರಿಗೆ ದಿನಾಂಕ 05.03.2025 ರಂದು ಆಸ್ಪತ್ರೆಗೆ ಬಂದಿದ್ದರು. ಅರ್ಜಿದಾರ ಸದ್ರಿ ದಿನ ಆಸ್ಪತ್ರೆಗೆ ಬಂದಾಗ ವಕ್ರವಾಗಿ ಜೋಡಣೆ ಆಗಿದ್ದರೆ ಅದನ್ನು ನಮ್ಮ ದಾಖಲೆಗಳಲ್ಲಿ ಬರೆಯುತ್ತಿದ್ದೆನು ಎಂದರೆ ಸರಿಯಲ್ಲ. ಅರ್ಜಿದಾರನಿಗೆ ತೋರುಬೆರಳು ವಕ್ರವಾಗಿ ಜೋಡಣೆ ಆಗಿರುವುದರಿಂದ ಹೆಚ್ಚಿನ ಚಿಕಿತ್ಸೆ ಪಡೆಯಲು ನಾನು ಸಲಹೆ ಸೂಚನೆ ನೀಡಿರುವುದಿಲ್ಲ. ಅರ್ಜಿದಾರನ ತೋರುಬೆರಳು ವಕ್ರವಾಗಿ ಜೋಡಣೆ ಆಗಿದೆ ಎಂದು ಕಂಡುಬಂದರೆ ಹೆಚ್ಚಿನ ಚಿಕಿತ್ಸೆಗೆ ಸಲಹೆ ನೀಡುತ್ತಿದ್ದೆನು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ವಕ್ರವಾಗಿ ಜೋಡಣೆ ಆಗಿರುವುದರಿಂದ ಅದಕ್ಕೆ ಯಾವುದೇ ಚಿಕಿತ್ಸೆ ಇರುವುದಿಲ್ಲ, ಅದಕ್ಕೆ ಫಿಜಿಯೊಥೆರಪಿ ಮಾತ್ರ ಇರುತ್ತದೆ ಎಂದು ನುಡಿಯುತ್ತಾರೆ. ನಿಪಿ-5 ರಲ್ಲಿ ಮೊದಲ ಬಾರಿಗೆ ಅರ್ಜಿದಾರನ ತೋರುಬೆರಳು ವಕ್ರವಾಗಿ ಜೋಡಣೆ ಆಗಿದೆ ಎಂದು ಬರೆದಿರುತ್ತೇನೆ ಎಂದರೆ ಸರಿ.

ನಿಪಿ-5 ರಲ್ಲಿ First power reduced by 40%, movement reduced by 2/3 finger by 30%, not able to hold objects tightly and deformative ಪ್ರತ್ಯೇಕವಾಗಿ ಬರೆದು ಲೆಕ್ಕ ಬರೆದಿರುವುದಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರನಿಗೆ ಯಾವುದೇ ಅಂಗನ್ಯೂನ್ಯತೆ ಇರುವುದಿಲ್ಲ, ಅರ್ಜಿದಾರ ನಮ್ಮ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿದ್ದಕ್ಕೆ ಅರ್ಜಿದಾರನಿಗೆ ಹೆಚ್ಚಿನ ಪರಿಹಾರ ಪಡೆದುಕೊಳ್ಳಲು ನಿಪಿ-5 ರಂತೆ ಸುಳ್ಳು ಪ್ರಮಾಣ ಪತ್ರ ಸೃಷ್ಟಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

1ನೇ ಎದುರುದಾರ ಮತ್ತು ಅವರ ಪರ ವಕೀಲರು ಗೈರು ಹಾಜರಿದ್ದ ಕಾರಣ ಅವರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆ ಇಲ್ಲ.

(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ.

**Sd/-**

ಮೆಂಬರ್ ಎಡಿಶನಲ್ ಎಂಎಸಿಟಿ ಮತ್ತು
ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.